ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಈ ರಸ್ತೆಯು 10 ಕಿಮೀ. ಉದ್ದವಿದ್ದು, ಮಂಜೂರಾದ 4.0 ಕಿಮೀ. ಉದ್ದಕ್ಕೆ ಗ್ರೇಡ್-1 ಮತ್ತು ಗ್ರೇಡ್-2ರ ಜಲ್ಲಿಯನ್ನು ಹಾಕಲಾಗಿದೆ.

ಆ) ಬಂದಿದೆ. ಇದುವೆರಗೂ 50 ಮೀಟರ್ ಉದ್ದಕ್ಕೆ ಡಾಂಬರೀಕರಣ ಆಗಿದ್ದು, ಉಳಿದ ಭಾಗಕ್ಕೆ 1998-99ನೇ ಸಾಲಿನಲ್ಲಿ ಡಾಂಬರು ಮಾಡಲಾಗುವುದು.

ಸುಳ್ಯ ತಾಲ್ಲೂಕಿನ ಗೌರಿ ಹೊಳೆಗೆ ಸೇತುವೆ ಕಾರ್ಯ

793 - ಶ್ರೀ ವಿ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ತಾಲ್ಲೂಕಿನ ಬೆಳ್ಳಾರೆ ಮದ್ದತ್ತು ಸವಣೂರು ರಸ್ತೆ ಸಂಪರ್ಕಕ್ಕೆ ಗೌರಿ ಹೊಳೆಗೆ ನಿರ್ಮಾಣವಾಗಲಿರುವ ಸೇತುವೆ ಕಾಮಗಾರಿ ಕೆಲಸವು ಸ್ಥಗಿತವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣವೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹಿಂದೆ ಸ್ಥಗಿತಗೊಂಡಿದ್ದು, 97-98ನೇ ಸಾಲಿನಲ್ಲಿ ಪುನರಾರಂಭಿಸಲಾಗಿದೆ.

ಆ) ಕೆಲಸ ಪ್ರಗತಿಯಲ್ಲಿದ್ದು 7 ಲಕ್ಷ ರೂ. ಪ್ರಗತಿಯಾಗಿರುತ್ತದೆ.(3-98)

ರಸ್ತೆಗಳ ಗಟಾರು ಕುರಿತು

794 - ಶ್ರೀ ಡಾ|| ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆ ಹೆಚ್ಚಾಗಿ ಗಟಾರುಗಳಿಲ್ಲದೇ ರಸ್ತೆಗಳು ಹಾಳಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ರಸ್ತೆ ಕಾಮಗಾರಿ ಅಂದಾಜು ತಯಾರಿಸುವಾಗ ಗಟಾರವನ್ನು ಸೇರಿಸಲು ಸರ್ಕಾರದವರು ಪರಿಶೀಲಿಸುವರೆ?

ಇ) ಈ ಗಟಾರವನ್ನು ಸುಸ್ಥಿತಿಯಲ್ಲಿಡಲು ಹೆಚ್ಚಿನ ಅನುದಾನವನ್ನು ಕೊಡಮಾಡುವಿರಾ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ನಗರದ ಮಿತಿಯಲ್ಲಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ರಸ್ತೆ ಕಾಮಗಾರಿ ಅಂದಾಜು ತಯಾರಿಸುವಾಗ, ಗಟಾರಕ್ಕೆ ಬೇಕಾದ ಮಣ್ಣಿನ ಕೆಲಸಕ್ಕೆ ಮಾತ್ರ ಅವಕಾಶ ಮಾಡಲಾಗುತ್ತದೆ.